## ಅಲಂಕಾರಿಕ ಬಾಳೆ

# ಮ್ಯೂಸೇಸಿ

ಚಿತ್ರ-ಬರಹ:
ಸದಾರಮೆ





ನೋಡಲು ಕೃಷಿಬಾಳೆಯಂತೆ ಕಾಣುವ ಆದರೆ ಕುಬ್ಜ ಗಿಡವಾದ ಈ ಬಾಳೆಗಿಡವು ಹೆಲಿಕೋನಿಯಾ ಜಾತಿಗೆ ಸೇರಿದ್ದು ಇದನ್ನು ಮ್ಯೂಸೇಸಿ ಎನ್ನುತ್ತಾರೆ. ಸಾಮಾನ್ಯವಾಗಿ ಎಲ್ಲಾ ಬಾಳೆಗಿಡಗಳು ಮೋತೆ ಹಾಕುತ್ತಿದ್ದಂತೆ ಬಾಗಿ ಗೊನೆ ಹಾಕಿದರೆ ಈ ಬಾಳೆಗಿಡದಲ್ಲಿ ಹೊರಬಂದ ಮೋತೆ ಮತ್ತು ಗೊನೆಯು ನೇರವಾಗಿದ್ದು ಲಂಬವಾಗಿರುತ್ತದೆ. ಆಕರ್ಷಕ ಬಣ್ಣದ ಮೋತೆಯೊಂದಿಗೆ ಆಕಾಶದೆಡೆಗೆ ಮುಖಮಾಡಿರುವ ಪುಟ್ಟಬಾಳೆಗೊನೆಯು ಎಂಥವರನ್ನೂ ಒಮ್ಮೆ ತನ್ನತ್ತ ಸೆಳೆದು ಚಕಿತಗೊಳಿಸದೆ ಇರಲಾರದು.

ಮೋಹಕವಾದ ಪುಟ್ಟಕಾಯಿಗಳಿಂದ ತುಂಬಿರುವ ಈ ಬಾಳೆಗಿಡಗಳನ್ನು ಅಲಂಕಾರಿಕವಾಗಿ ಹೂವಿನ ತೋಟಗಳಲ್ಲಿ, ಪಾರ್ಕ್‌ಗಳಲ್ಲಿ, ಆಸ್ಪತ್ರೆ ಆವರಣಗಳಲ್ಲಿ ಹೆಚ್ಚಾಗಿ ಬೆಳೆಸುತ್ತಾರೆ. ಒಂದು ಗಿಡ ನೆಟ್ಟರೂ ಸಾಕು ಬುಡದಲ್ಲಿ ಹಲವಾರು ಕಂದುಗಳು ಹುಟ್ಟಿಕೊಂಡು ಸಸ್ಯಾಭಿವೃದ್ಧಿಯಾಗುತ್ತದೆ. ಆಫ್ರಿಕಾ, ಏಷ್ಯಾದ ಉಷ್ಣವಲಯದ ಭಾಗದಲ್ಲಿ ಮತ್ತು ಆಸ್ಟ್ರೇಲಿಯಾದಲ್ಲಿ ಮ್ಯೂಸೇಸಿ ಬಾಳೆಯು ಹೆಚ್ಚಾಗಿ ಕಂಡುಬರುತ್ತದೆ. ಗುಂಪು ಗುಂಪಾಗಿ ಬೆಳೆಯುವ ಈ ಗಿಡಗಳಿಗೆ ಹೆಚ್ಚಿನ ನೀರಿನ ಅಗತ್ಯವಿಲ್ಲ. ವಾರಕ್ಕೊಮ್ಮೆ ನೀರುಣಿಸಿದರೂ ಸಾಕು ಸೊಂಪಾಗಿ ಬೆಳೆದು ತಂಪುಕೊಡುತ್ತದೆ. ಇವುಗಳನ್ನು ಮ್ಯೂಸೇ ರೆಡ್, ಪಿಂಕ್, ನಸುನೇರಳೆ ಮಿಶ್ರಿತ ಕೆಂಪು, ಆರೆಂಜ್ ಇತ್ಯಾದಿ ಹಲವಾರು ಬಣ್ಣಗಳಲ್ಲಿ ಕಾಣಬಹುದು.

ಇತ್ತೀಚೆಗೆ ತಳಿ ಪರಿವರ್ತನೆಯಿಂದಾಗಿ ಇನ್ನೂ ಹಲವಾರು ವಿವಿಧ ಬಾಳೆಗಳನ್ನು ಕಾಣಬಹುದು. ಇದನ್ನು ಕಟ್‌ಫ್ಲವರ್ ಆಗಿ ಬಳಸುತ್ತಾರೆ. ಶುಭಸೂಚಕವಾದ ಬಾಳೆಯನ್ನು ಮಂಗಳಕಾರ್ಯಗಳಲ್ಲಿ ತೋರಣಕ್ಕಾಗಿ, ಇತರ ಹೂವುಗಳ ಜೊತೆ ಹೂದಾನಿಗಳಲ್ಲಿ, ಸಭೆ ಸಮಾರಂಭಗಳಲ್ಲಿ ವೇದಿಕೆ ಅಲಂಕಾರಕ್ಕಾಗಿ ಈ ಬಾಳೆಯನ್ನು ಉಪಯೋಗಿಸುತ್ತಾರೆ. ಯಾವುದೇ ರೋಗ-ಕೀಟಗಳ ಬಾಧೆಗಳಿಲ್ಲದ ಈ ಬಾಳೆಗಿಡವನ್ನು ನೀರು ಹೆಚ್ಚು ನಿಲ್ಲದ ಸ್ಥಳಗಳಲ್ಲಿ ಬಹಳ ಸುಲಭವಾಗಿ ಬೆಳೆಸಬಹುದು. ಗಾಢ ಹಸಿರುಬಣ್ಣದ ಇದರ ಎಲೆಗಳು ಬಿಸಿಲಿನ ಬೇಗೆಯಿಂದ ಪಾರುಮಾಡಿ ತಂಪಿನ ಅನುಭವವನ್ನು ನೀಡಿದರೆ ಗುಂಪುಗುಂಪಾದ ಹಸಿರೆಲೆಗಳ ಮಧ್ಯೆ ಕಂಡುಬರುವ ಇದರ ಬಣ್ಣಬಣ್ಣದ ಮೋತೆ ಮತ್ತು ಕಾಯಿಗಳು ಮನಕ್ಕೆ ಮುದನೀಡಬಲ್ಲದು.